## ಚಂದನವೆಂಬ ಚುಂಬಕ

ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಬಹುತೇಕ ಎಲ್ಲ ವಾಹಿನಿಗಳು ಅದಕ್ಕೆ ಸಂಬಂಧಿಸಿದ ಸುದ್ದಿಗಳನ್ನೇ ಹಗಲೂ ರಾತ್ರಿ ಪ್ರಸಾರ ಮಾಡುತ್ತಿವೆ. ಇದರಿಂದಾಗಿ ಬೋರ್ ಅನ್ನಿಸಿದವರಿಗೆ 'ಚಂದನ' ವಾಹಿನಿ ಚುಂಬಕದಂತೆ ಒದಗಿಬಂತು. ಅದು ಒಳ್ಳೆಯ ಮನೋರಂಜನೆಯ ಕಾರ್ಯಕ್ರಮಗಳನ್ನು ನೀಡಿ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಇತ್ತೀಚೆಗೆ ಪ್ರಸಾರವಾದ 'ಕಾವ್ಯ ಕನ್ನಿಕಾ' ಕಾರ್ಯಕ್ರಮ ಇಷ್ಟ ಆಯಿತು. ಚಂದನ ವಾಹಿನಿಯಲ್ಲಿ ಬಿತ್ತರವಾಗುವ ಬಹುತೇಕ ಕಾರ್ಯಕ್ರಮಗಳು ಮತ್ತು ಧಾರಾವಾಹಿಗಳು ಕುಟುಂಬ ವ್ಯವಸ್ಥೆಯನ್ನು ಹಾಳು ಮಾಡುವಂತೆ ಇರುವುದಿಲ್ಲ.

—ನಾರಾಯಣ ಯಾಜಿ ಶಿರಾಲಿ

## ಅದ್ವಿತೀಯ ಗುರು

ಝೀ ಕನ್ನಡದ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮ ಚೆನ್ನಾಗಿ ಮೂಡಿಬರುತ್ತಿದೆ. ಸಿಹಿಕಹಿ ಚಂದ್ರು, ಗುರುರಾಜ ಕರ್ಜಗಿ ಅವರ ಕಾರ್ಯಕ್ರಮ ನೋಡುವ ಅವಕಾಶ ನನ್ನ ಸೌಭಾಗ್ಯವೇ ಸರಿ. ಪ್ರಜಾವಾಣಿಯಲ್ಲಿ ಪ್ರಕಟಿತ 'ಕರುನಾಡು ಬಾ ಬೆಳಕೆ' ಅಂಕಣದ ಎಲ್ಲ ಬರಹಗಳನ್ನು ಓದಿರುವೆ. ಅವರ ವಿಶಿಷ್ಟ ಅನುಭವದ ಮಾತುಗಳು ಯುವಕರಿಗೆ ಆದರ್ಶದಾಯಕ. ಅವರ ಅನುಭವದ ಕೆಲವು ಮಾತುಗಳು ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯ ಆಗಿದ್ದ ನನ್ನ ಅಪ್ಪ ಸಂಗಪ್ಪ ಅವರ ಕಾರ್ಯವೈಖರಿಯನ್ನೂ ನೆನಪಿಸಿದವು. ಅವರು 1966ರಲ್ಲಿ ಕಾರ್ಯನಿಮಿತ್ತ ಬೆಂಗಳೂರಿಗೆ ಬಂದಿದ್ದಾಗ ಮೆಜೆಸ್ಟಿಕ್ ಬಳಿ ಸಣ್ಣ ಅಪಘಾತ ಸಂಭವಿಸಿ ತೀವ್ರ ಗಾಯಗೊಂಡಿದ್ದರು. ಆದಾಗ್ಯೂ ತಮ್ಮ ವಿದ್ಯಾರ್ಥಿಗಳನ್ನು ಮನೆಗೆ ಕರೆಸಿ ಪಾಠ ಮಾಡುತ್ತಿದ್ದರು. ಜೀವನಕ್ಕೆ ಮಾದರಿಯಾಗುವಂತಹ ಒಳ್ಳೆಯ ಸಂದೇಶವನ್ನು ಗುರುರಾಜ ಕರ್ಜಗಿಯವರು ನೀಡಿದರು.

—ಕಮಲಾದೇವಿ ರಾಜಶೇಖರ ಹಳ್ಳೂರ್

'ವೀಕ್ ಎಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಏಪ್ರಿಲ್ 29 ರಂದು ಪ್ರಸಾರವಾದ ಸಿಹಿಕಹಿ ಚಂದ್ರು, ಏಪ್ರಿಲ್ 30 ರಂದು ಪ್ರಸಾರ ಮಾಡಿದ ಗುರುರಾಜ ಕರ್ಜಗಿ ಅವರ ಸಂದರ್ಶನ ಹಿತ ಎನಿಸಿದವು. ಅವರ ಜೀವನದ ಕೆಲವೊಂದು ಘಟನೆಗಳನ್ನು ನೆನಪಿಸಿದ್ದು ಸೊಗಸಾಗಿತ್ತು. ಕರ್ಜಗಿ ಮಾತು ಮುತ್ತಿನಹಾರದಂತೆ ಇದ್ದವು. 'ಕೊಲೆಗಾರನ ಮನಸ್ಸನ್ನು ಬದಲಿಸಿದ ಬುದ್ಧನ ಪವಾಡ' ಮಾರ್ಮಿಕವಾಗಿತ್ತು. ನಿರೂಪಕ ನಟ ರಮೇಶ್ ಅರವಿಂದ್ ಅವರ ದನಿ, ಹಾವ ಭಾವ ಆಕರ್ಷಕವಾಗಿದೆ. ಅವರ ಹಿತಮಿತವಾದ ಮಾತು ಕಾರ್ಯಕ್ರಮಕ್ಕೆ ಕಳಶಪ್ರಾಯವಾಗಿದೆ. ಇಂತಹ ಕಾರ್ಯಕ್ರಮ ನಿರಂತರವಾಗಿರಲಿ, ಶ್ರೀಸಾಮಾನ್ಯರಲ್ಲಿಯೂ ಅಸಾಮಾನ್ಯರನ್ನು ಗುರುತಿಸುವ ಕೆಲಸವನ್ನು ಝೀ ಕನ್ನಡ ಮಾಡಲಿ. ಈಗಾಗಲೇ 'ಸರಿಗಮಪ'ದಂತಹ ಸಂಗೀತ ರಿಯಾಲಿಟಿ ಶೋನಲ್ಲಿ ಅದನ್ನು ಮಾಡಿ ತೋರಿಸಿದೆ.

—ಭಾರತೀ ಗಂಗಾಧರ್; ಹೆಚ್.ಎಸ್. ಅನ್ನಪೂರ್ಣಮ್ಮ; ಕೆ.ಎಸ್. ಸವಿತ ಬೆಂಗಳೂರು; ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ವಾರದ ಪತ್ರ

## ಆಪ್ತ-ಮೋಹಕ ಜಾಹೀರಾತು

'ಟೀ ಕುಡಿತೀರಾ ಎಂಜಿನಿಯರ್ ಸಾಹೇಬ್ರೆ' ಅಂತ ಪತಿಯನ್ನು ಪತ್ನಿ ಪ್ರೀತಿಯಿಂದ ಮಾತಿಗೆಳೆಯುತ್ತಾಳೆ. 'ನಿಮಗೆ ನೆನಪಿದೆಯಾ, ನಮ್ಮ ಮದುವೆಯಾಗಿ 50 ವರ್ಷಗಳು ಕಳೆದಿವೆ' ಎಂದು ಛೇಡಿಸುವ ಧಾಟಿಯಲ್ಲಿ ಕೇಳುತ್ತಾಳೆ. ತಕ್ಷಣ ಆಕೆಯ ಪತಿ 'ವಿ ಗಾರ್ಡ್' ವೈರಿನ ಪುಟ್ಟ ಉಂಗುರವನ್ನು ಮಾಡಿ ಹೆಂಡತಿಯ ಬೆರಳಿಗೆ ತೊಡಿಸುತ್ತಾನೆ. 'ಇನ್ನೂ 50 ವರ್ಷಗಳು ನನ್ನನ್ನು ಇದೇ ರೀತಿ ಸಹಿಸಿಕೊಳ್ಳುತ್ತೀಯ' ಎಂಬ ಸಂಭಾಷಣೆಯ ಜಾಹೀರಾತು ನಿಜಕ್ಕೂ ಮನೋಹರವಾಗಿದೆ. ಸಾಮಾನ್ಯವಾಗಿ ಟೀವಿ ಜಾಹೀರಾತು ನೋಡಲು ಅಷ್ಟಾಗಿ ಯಾರು ಇಷ್ಟಪಡುವುದಿಲ್ಲ. ಈ ಜಾಹೀರಾತಿನ ಸಂಭಾಷಣೆ 'ಒಲವೇ ಜೀವನ ಸಾಕ್ಷಾತ್ಕಾರ' ಅನ್ನುವ ಸುಂದರ ಹಾಡಿನ ಸಾಲುಗಳನ್ನು ಪ್ರತಿಬಿಂಬಿಸುತ್ತದೆ.

ಒಂದು ವಾಣಿಜ್ಯ ಉದ್ದೇಶದ ಜಾಹೀರಾತಿನಲ್ಲಿಯೂ ಮನುಷ್ಯ ಸಂಬಂಧದ ಭಾವುಕನೆಲೆಯನ್ನು ಗುರುತಿಸಿ ನಿರೂಪಿಸುವ ಕಲೆಯನ್ನು ಮೆಚ್ಚಲೇಬೇಕು. ಸಂಬಂಧದ ಭಾವಸೇತುವೆಯಲ್ಲಿ ಸಾಗಬೇಕಾದ ಧಾರಾವಾಹಿಗಳ ಕಥೆಗಳೂ ಎಷ್ಟೋ ಸಂದರ್ಭದಲ್ಲಿ ಭಾವ ತಂತುಗಳನ್ನೇ ಕತ್ತರಿಸುವ, ಕುಟುಂಬ ಕಲಹವನ್ನೇ ಪ್ರಧಾನವಾಗಿ ವೈಭವೀಕರಿಸುವ ಸಂದರ್ಭದಲ್ಲಿ ಇಂತಹ ಜಾಹೀರಾತು ಆಪ್ತ ಎನಿಸುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಕಿರುತೆರೆಗೆ ಸೆನ್ಸಾರ್ ಅತ್ಯಗತ್ಯ

ಕನ್ನಡ ಟೀವಿ ಕಾರ್ಯಕ್ರಮಗಳ ಬಗ್ಗೆ ಏನು ಹೇಳಬೇಕೋ ಗೊತ್ತಿಲ್ಲ. ವೀಕ್ಷಕರ ಯಾವುದೇ ಸಲಹೆಯನ್ನೂ ವಾಹಿನಿಯವರು ಗಂಭೀರವಾಗಿ ತೆಗೆದುಕೊಳ್ಳುವುದೇ ಇಲ್ಲ. ಬಹುತೇಕ ಧಾರಾವಾಹಿಗಳಲ್ಲಿ ಹೆಣ್ಣು–ಗಂಡು ಭೇದವಿಲ್ಲದೇ ತೂರಾಡುತ್ತಾರೆ. ಇದು ಕೌಟುಂಬಿಕ ವಾತಾವರಣದಲ್ಲಿ ಎಂತಹ ಪರಿಣಾಮ ಬೀರುತ್ತದೆ ಎನ್ನುವ ವಿವೇಕ ಇಲ್ಲದಿರುವುದು ವಿಷಾದನೀಯ. ಈ ಕಾಲದಲ್ಲಿಯೂ ದೈಹಿಕ ಹಲ್ಲೆಯ ಕಥೆಯನ್ನು ಹೆಣೆಯುವುದು ಎಷ್ಟು ಸೂಕ್ತ. ಸಿನಿಮಾಗಳಲ್ಲಿ ಸೆನ್ಸಾರ್ ಕಾರಣಕ್ಕಾದರೂ ಒಂದಿಷ್ಟು ನಿಯಂತ್ರಣ ಇದೆ ಎಂದೆನಿಸುತ್ತದೆ. ಟೀವಿಯವರಿಗೆ ಯಾವುದೇ ನಿರ್ಬಂಧ ಇಲ್ಲ. ಹೀಗೆ ಆದರೆ ಮುಂದೆ ಏನೇನು ತೋರಿಸುತ್ತಾರೋ ಯಾರಿಗೆ ಗೊತ್ತು. ಈ ಹಿನ್ನೆಲೆಯಲ್ಲಿ ಟೀವಿಗಳಿಗೆ ಕಟ್ಟುನಿಟ್ಟಿನ ಸೆನ್ಸಾರ್ ಅತ್ಯಗತ್ಯ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮಾಯಾಮೃಗ: ನಿನಗಿದು ಸರಿಯೇ?

ಸಿರಿ ಕನ್ನಡದ 'ಮತ್ತೆ ಮಾಯಾಮೃಗ' ವೀಕ್ಷಕರ ಸಹನೆಯನ್ನು ಪರೀಕ್ಷಿಸುತ್ತಿದೆ. ಇಲ್ಲಿನ ಕೆಲವು ಘಟನೆಗಳಿಗೂ ಹಿಂದಿನ ಕಥೆಗೂ ತಾಳೆ ಆಗುವುದಿಲ್ಲ. ವಾಸಂತಿ ಲವಲವಿಕೆಯಿಂದ ನಟಿಸುತ್ತಿದ್ದಾರೆ. ತಂದೆಯನ್ನೇ ಕೊಲ್ಲಲು ಮಂಜಣ್ಣನ ಮಗ ಮತ್ತು ಸೊಸೆ ಸಂಚು ರೂಪಿಸುವುದು ಬೇಸರ ತರಿಸುತ್ತದೆ. ಇಂತಹ ಘಟನೆಗಳು ವಾಸ್ತವವೇ ಆಗಿದ್ದರೂ ಅದನ್ನು ಹೇಳುವಾಗ ಅದರ ಪರಿಣಾಮದ ತೀವ್ರತೆಯನ್ನು ಅರಿಯಬೇಕು.

—ಗೀತಾ ನೆಲ್ಲೀಕಾಯಿ

## ಬೊಂಬಾಟ್ ಅಲ್ಲ, ಸಿರಿವಂತ ಭೋಜನ

'ಬಡವರ ಮನೆ ಊಟ ಚಂದ, ಶ್ರೀಮಂತರ ಮನೆ ನೋಟ ಚಂದ' ಎಂಬ ಗಾದೆ ಮಾತಿದೆ. ಆದರೆ ಸಿಹಿಕಹಿ ಚಂದ್ರು ನಡೆಸಿಕೊಡುವ 'ಬೊಂಬಾಟ್ ಭೋಜನ' ಕಾರ್ಯಕ್ರಮ ಈ ಗಾದೆಗೆ ವಿರುದ್ಧವಾಗಿದೆ. ಚಂದ್ರು ಅವರ ಬಹುತೇಕ ಸಂಚಿಕೆಗಳನ್ನು ಗಮನಿಸಿದರೆ, ಸಿರಿವಂತರ ಮನೆಗಳಿಗೆ ಹೆಚ್ಚಾಗಿ ಹೋಗಿ ಹರಟುತ್ತಾ ಔತಣ ಸವಿಯುತ್ತಾರೆ. ಮಹಿಳಾ ಸಂಘಗಳ ಸಂಚಿಕೆಗಳಲ್ಲಿಯೂ ಭರ್ಜರಿ ಅಲಂಕಾರ ಪ್ರದರ್ಶನಕ್ಕೆ ಸೀಮಿತವಾಗಿದೆ. ಅಪರೂಪಕ್ಕೆ ಉತ್ತರ ಕರ್ನಾಟಕದ ಕಡೆ ಮುಖ ಮಾಡಿದ್ದಾರೆ.

ಹಳೇಮೈಸೂರು ಕಡೆಯ ಸೊಪ್ಪಾರು, ಬಸ್ಸಾರು, ಉಪ್ಸೆಸರು, ರಾಗಿಮುದ್ದೆ... ಇನ್ನೂ ಪರಿಚಯಿಸಿಲ್ಲ. ಗ್ರಾಮೀಣ ಪ್ರದೇಶದ ಅಡುಗೆಗಳನ್ನು ಈಗಿನ ಪೀಳಿಗೆಗೆ ಕಲಿಸಿಕೊಟ್ಟರೆ ಭೋಜನ ಬೊಂಬಾಟ್ ಆಗಿ ಬಿಡುತ್ತೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಸಜ್ಜನಿಕೆಯ ದುರುಪಯೋಗ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮೀ' ಸೊಗಸಾಗಿ ಮೂಡಿಬರುತ್ತಿದೆ. ಅಕ್ಕ ತಂಗಿಯರ ಬಾಂಧವ್ಯದ ಕಥೆ–ಆಶಯ ಚೆನ್ನಾಗಿದೆ. ಆದರೆ ತಾಂಡವ್ ತನ್ನ ಹೆಂಡತಿ ಭಾಗ್ಯಾ ಮೇಲೆ ಕೋಪಗೊಳ್ಳುವುದು ಅತಿಶಯ ಎನಿಸುತ್ತಿದೆ. ಅತಿಯಾದರೆ ಅಮೃತವೂ ವಿಷ ಎಂಬಂತೆ ಒಳ್ಳೆಯತನ ಕೂಡ ಅತಿಯಾದರೂ ಕಷ್ಟವೇ. ಹೀಗೆ 'ಅತಿಯಾದ ಒಳ್ಳೆಯತನ' ತೋರುವ ನಾಯಕಿಯರನ್ನು, 'ಲೇಡಿ ವಿಲನ್'ಗಳು ದುರುಪಯೋಗ ಮಾಡಿಕೊಳ್ಳುತ್ತಾರೆ.

—ಸುಮಾ, ಮಂಡ್ಯ